- -                                        ಓ ಎಸ್ ನಂ. 173/2023

ಪಿ.ಡಬ್ಲ್ಯೂ :1

ದಿನಾಂಕ :16-10-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಪಾಟೀ ಸವಾಲುಃ**1** ರಿಂದ **5, 9** ರಿಂದ **11** ನೇ ಪ್ರತಿವಾದಿಗಳ ಪರ ಶ್ರೀ ಕೆ ಎನ್ ಎಸ್ ವಕೀಲರಿಂದಃ</u>

ದಾವಾ ಸ್ವತ್ತು ಪ್ರಸುತ್ತ 6 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ .ನಾನು ಸರ್ವೆ ನಂ. 62/1 ಎ 1 ರಲ್ಲಿ ಒಟ್ಟು 35 ಗುಂಟೆ ಸ್ವತ್ತನ್ನು ಖರೀದಿಸಿದ್ದೇನೆ, ಅದರ ಚಕ್ಕುಬಂದಿ ಪೂರ್ವಕ್ಕೆಃ ಒದಲೂರು ಶಿವಣ್ಣ ರವರ ಸ್ವತ್ತು , ಪಶ್ಚಿಮಕ್ಕೆ ಃ ಸರ್ಕಾರಿ ರಸ್ತೆ , ಉತ್ತರಕ್ಕೆ ಃ ಸರ್ಕಾರಿ ಶಾಲೆ , ದಕ್ಷಿಣಕ್ಕೆ ಃ ಸಂಗಪ್ಪ ರವರ ಸ್ವತ್ತು . ಸದರಿ ವಿಸ್ತೀರ್ಣದ ಸ್ವತ್ತಿನಲ್ಲಿ ಕೇವಲ 22 ಗುಂಟೆ ಸ್ವತ್ತಿಗೆ ನಿಮ್ಮ ಹೆಸರಿಗೆ ಖಾತೆಯಾಗಿದ್ದು ಉಳಿದ 13 ಗುಂಟೆ ಸ್ವತ್ತಿಗೆ ಖಾತೆ ಯಾವ ಕಾರಣಕ್ಕೆ ದಾಖಲಾಗಿಲ್ಲ ಎಂದರೆ ಸಾಕ್ಷಿಯು ನಾವು 35 ಗುಂಟೆ ಸ್ವತ್ತಿನ ಖಾತೆ ಮಾಡಿಸಿಲ್ಲ ಎಂದು ತಿಳಿಸಿದ್ದಾರೆ . 22 ಗುಂಟೆ ಸ್ವತ್ತಿನ ಖಾತೆ ನನ್ನ ಹೆಸರಿನಲ್ಲಿ ದಾಖಲಾಗಿಲ್ಲ . ಕೇವಲ 13 ಗುಂಟೆ ಸ್ವತ್ತಿಗೆ ಸಂಬಂಧಿಸಿ ಏಕೆ ದಾವೆ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ರೆವಿನ್ಯೂ ಅಧಿಕಾರಿಗಳು ಸಿದ್ದಲಿಂಗಪ್ಪ ರವರ ಹೆಸರಿಗೆ ಖಾತೆ ಮಾಡುವಾಗ 13 ಗುಂಟೆ ಸ್ವತ್ತನ್ನು ಕೈಬಿಟ್ಟಿದ್ದಾರೆ , ಆದುದರಿಂದ ಅಷ್ಟೇ ವಿಸ್ತೀರ್ಣಕ್ಕೆ ದಾವೆ ಸಲ್ಲಿಸಿದ್ದೇವೆ ಎಂದು ತಿಳಿಸಿದ್ದಾರೆ . ದಾವಾ ಸ್ವತ್ತು ಮತ್ತು ಇನ್ನೂ ಉಳಿದ ವಿಸ್ತೀರ್ಣದ ಸ್ವತ್ತು 6 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ದಾಖಲಾಗಿದೆ ಎಂದರೆ ಸರಿ . ದಾವಾ ಸ್ವತ್ತಿನ ಖಾತೆ ಅಂತಿಮ ಡಿಕ್ರಿ ಪ್ರಕರಣದ ಆದೇಶದ ಪ್ರಕಾರ 6 ನೇ ಪ್ರತಿವಾದಿಯ ಹೆಸರಿಗೆ ದಾಖಲಾಗಿದೆ ಎಂದರೆ ಸರಿಯಲ್ಲ . ದಾವಾ ಸ್ವತ್ತಿನಲ್ಲಿ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ರಸ್ತೆಯಲ್ಲಿ ಓಡಾಡುತ್ತಾರೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯೊಡನೆ ಶಾಮೀಲಾಗಿ ಉಳಿದ ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಸೇರಿದಂತೆ ನಾನು ಖರೀದಿಸಿರುವ ಒಟ್ಟು ಸ್ವತ್ತಿನ ಪೂರ್ವಕ್ಕೆ ಇರುವ ಸ್ವತ್ತಿನಲ್ಲಿ ಉಳಿದ ಪ್ರತಿವಾದಿಗಳಿಗೆ ಭಾಗಾಂಶದಲ್ಲಿ ಸ್ವತ್ತು ಬಂದಿದ್ದು ಅವರುಗಳು ಅದರಲ್ಲಿ ಸ್ವಾಧೀನ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ , ಸುಳ್ಳು ಎಂದು ಹೇಳಿದ್ದಾರೆ .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .